# ಗುರು ಶಿಷ್ಯರ ಸಂಬಂಧ

**ಸುತ್ತೂರು, ಮೇ-13:** ಗುರು ಅಜ್ಞಾನವನ್ನು ತೊಡೆದು ಹಾಕಿದರೆ, ಶಿಷ್ಯ ಶಿಷ್ಟಾಚಾರ ಮತ್ತು ಜ್ಞಾನವನ್ನು ಗುರುವಿನಿಂದ ಪಡೆಯುವನು ಎಂದು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಆಯೋಜಿಸಿರುವ ಅಧ್ಯಯನ ಶಿಬಿರದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ಸಿ.ಪಿ. ರಾಮಶೇಷುರವರು ತಿಳಿಸಿದರು.

ನಿಷೇಧ, ಕಾಮ್ಯ, ಸೂಚಕ, ವಾಚಕ, ಕಾರಕ ಮತ್ತು ವಿಹಿತ ಗುರುವರು ಎಂದು 6 ವಿಧದ ಗುರುಗಳನ್ನು ಕಾಣಬಹುದು. ಅಪರ ವಿದ್ಯೆ, ವೃತ್ತಿ ಕ್ಷೇತ್ರದ ಮತ್ತು ಜಗತ್ತಿನ ಜ್ಞಾನ ನೀಡಿದರೆ, ಪರಾವಿದ್ಯೆ ಜಗತ್ತಿನ ಹಿಂದಿರುವ ಸತ್ಯ ಮತ್ತು ಸ್ವರೂಪ ಜ್ಞಾನವನ್ನು ತಿಳಿಸುತ್ತದೆ. ಗುರು ಜ್ಯೋತಿ ಸ್ವರೂಪ, ಆತನಿಗೆ ಸತ್ಯ ದರ್ಶನವಾದೊಡನೆ ಸಂಕುಚಿತ ಭಾವನೆಗಳು ಮರೆಯಾಗಿ ವಿಶಾಲ ಭಾವನೆ ತಾಳುವನು. ಗುರು ತನ್ನ ಶಿಷ್ಯನನ್ನು ಜ್ಞಾನ ಸ್ವರೂಪನಾಗಿ ಪರಿವರ್ತಿಸುವವನು (ಬುದ್ಧ-ಅಂಗುಲಿಮಾಲ). ಮೈಲಾರ ಬಸವಲಿಂಗ ಶರಣರು ನೀನೊಲಿದು ಪಾದವನ್ನಿಟ್ಟ ನೆಲವೆ ಸುಕ್ಷೇತ್ರ, ಜಲವೇ ಪಾವನ ತೀರ್ಥ, ಸುಲಭ ಶ್ರೀ ಗುರುವೇ ಕೃಪೆಯಾಗು ಎಂಬ ಮಾತಿನಲ್ಲಿ ಗುರುಶಿಷ್ಯರ ಸಂಬಂಧವನ್ನು ತಿಳಿಸಿದರು.

ಗುರುಪೌರ್ಣಿಮಾ ದಿನದಂದು ವಿಶೇಷವಾಗಿ ಗುರುವಿನ ಮಹತ್ವ, ಮಹಿಮೆ ಹಾಗೂ ಕರುಣೆಯನ್ನು ಸ್ಮರಿಸಿ, ವರ್ಣಿಸಿ, ಭಕ್ತಿ ಭಾವದ ಭಜನೆ, ಪೂಜಿಸುವ ವಾಡಿಕೆ ಭಾರತೀಯ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ದಾರ್ಶನಿಕರು ಗುರುವಿನ ಆಶೀರ್ವಾದವನ್ನು ಸ್ಪರ್ಶದಿಂದ, ವಾಣಿಗಳಿಂದ, ದೃಷ್ಟಿಯಿಂದ ಹಾಗೂ ಸ್ಮರಣೆಯಿಂದ ವರ್ಣಿಸಿದ್ದಾರೆ. ಗುರುಶಿಷ್ಯರ ಸಂಬಂಧ ಋಣಾನುಬಂಧ ಮತ್ತು ಪೂರ್ವ ನಿರ್ಧರಿತ. ಗುರು ಶಿಷ್ಯ ವೃಂದದ ಸಾಮೂಹಿಕ ಪ್ರಾರ್ಥನೆಯು ಅತ್ಯಂತ ಮನಮುಟ್ಟುವಂತಿದೆ. ಜ್ಞಾನಕ್ಕಾಗಿ ನಾವಿಬ್ಬರು ಪ್ರಯತ್ನಶೀಲರಾಗೋಣ, ರಕ್ಷಿಸಲ್ಪಡೋಣ ಮತ್ತು ಪರಸ್ಪರ ದ್ವೇಷಿಸದಂತಾಗಲಿ ಎಂಬ ಪ್ರಾರ್ಥನೆ ಗುರುಶಿಷ್ಯರಲ್ಲಿನ ಸಂಬಂಧವನ್ನು ತಿಳಿಸುತ್ತದೆ ಎಂದು ತಿಳಿಸಿದರು. ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಅಧ್ಯಯನ ಶಿಬಿರದ ಶಿಬಿರಾರ್ಥಿಗಳು ಚಿಂತನ-ಮಂಥನದಲ್ಲಿ ಪಾಲ್ಗೊಂಡಿದ್ದರು.



ಚಿಂತನ–ಮಂಥನದಲ್ಲಿ ಪಾಲ್ಗೊಂಡ ಆಧ್ಯಾತ್ಮಿಕ ಜಿಜ್ಞಾಸುಗಳು